# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಡಾ. ಮಮತಾ ಎಸ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಡಾ. ಅಭಿಲಾಷ್ ಎಸ್ ವಿ | | **21.12.2024** |
| **ವಯಸ್ಸು** | ಃ **42 ವರ್ಷ** | | |
| **ವೃತ್ತಿ** | ಃ ಪಿಜಿ ವಿದ್ಯಾರ್ಥಿ | **ಪ್ರಾ.ಸಾ.** | ಃ 3 |
| **ವಾಸಸ್ಥಳ** | ಃ ಬೆಂಗಳೂರು | **ಚಾ.ಸಾ.** | ಃ 13 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೇ *2012* ರಿಂದ ನವಂಬರ್ *2023* ರವರೆಗೆ ಮೈಸೂರಿನ ಕೆ ಆರ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ *14.03.2023* ರಂದು ರಾತ್ರಿ *9.05* ಕ್ಕೆ ಚಂದನ್ ಎನ್ನುವ ವ್ಯಕ್ತಿ ಅದೇ ದಿನ ರಾತ್ರಿ *8.40* ಕ್ಕೆ ನಡೆದ ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರಿಗೆ ಆದಿತ್ಯ ಎಂಬುವವರು ಡ್ರ್ಯಾಗರ್ ನಿಂದ ತನ್ನ ಮನೆ ಬಳಿ ಹಲ್ಲೆ ಮಾಡಿದ್ದಾಗಿ ತಿಳಿಸಿದ್ದರು. ಅವರನ್ನು ಪರೀಕ್ಷಿಸಿದಾಗ ಅವರಿಗೆ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ

*1.*ಎಡ ಭುಜದ ಮೇಲೆ ಹರಿದ ಗಾಯ ಸುಮಾರು *2* ಇಂಟು *1* ಇಂಟು *0.5* ಸೆಂಟಿಮೀಟರ್ ಗಾತ್ರದ್ದು ಇತ್ತು

*2.* ಬೆನ್ನಿನ ಭಾಗದಲ್ಲಿ ಹರಿದ ಗಾಯ ಸುಮಾರು *2* ಇಂಟು *1* ಇಂಟು *1* ಸೆಂಟಿಮೀಟರ್ ಗಾತ್ರದ್ದು ಇತ್ತು.

ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಕಳುಹಿಸಿರುತ್ತೇನೆ. ಅಲ್ಲಿ ಅವರಿಗೆ ಎದೆ ಭಾಗದ ಎಕ್ಸರೇ ಮತ್ತು ಸ್ಕ್ಯಾನಿಂಗ್ ಮಾಡಿಸಿ ಅವರಿಗೆ ಒಳರೋಗಿಯಾಗಿ ದಾಖಲಾಗುವಂತೆ ತಿಳಿಸಿದ್ದರು. ಆದರೆ ಅವರು ಚಿಕಿತ್ಸೆ ಪಡೆಯದೆ ಅಲ್ಲಿಂದ ಹೊರಟು ಹೋಗಿದ್ದರು. ಎಕ್ಸರೆ ಮತ್ತು ಸ್ಕ್ಯಾನಿಂಗ್ ನಿಂದ ಅವರಿಗೆ ಯಾವುದೇ ತೊಂದರೆ ಇಲ್ಲ ಎಂದು ಕಂಡುಬಂದಿರುತ್ತದೆ. ಆದ್ದರಿಂದ ಅವರಿಗೆ ಆಗಿರುವಂತಹ ಗಾಯಗಳು ಸಾಮಾನ್ಯ ಸ್ವರೂಪದ್ದು ಎಂದು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ. ಈಗ ನೋಡುತ್ತಿರುವ ಗಾಯದ ಪ್ರಮಾಣ ಪತ್ರ ಅದೇ ಇರುತ್ತದೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ *7* ಎಂದು ಸಹಿಯನ್ನು ನಿಪಿ *7*(ಎ) ಎಂದು ಗುರುತಿಸಲಾಗಿದೆ.

ನಂತರ ದಿಃ *26.04.2023* ರಂದು ಈ ಪ್ರಕರಣದ ತನಿಖಾಧಿಕಾರಿಯು ಒಂದು ಡ್ರ್ಯಾಗರ್ ನ್ನು ನನ್ನ ಬಳಿ ಕಳುಹಿಸಿ ಅದರಿಂದ ಹಲ್ಲೆ ಮಾಡಿದರೆ ಆ ವ್ಯಕ್ತಿಗೆ ಆಗಿದ್ದಂತಹ ಗಾಯಗಳು ಆಗಬಹುದು ಎಂದು ಅಭಿಪ್ರಾಯ ಕೋರಿದರು. ಆಗ ನಾನು ಆ ಡ್ರ್ಯಾಗರ್ ನ್ನು ಪರೀಕ್ಷಿಸಿ ದಿಃ *03.05.2023* ರಂದು ಆ ಚಂದನ್ ರವರಿಗೆ ಆಗಿದ್ದ ಗಾಯಗಳು ಆ ಡ್ರ್ಯಾಗರ್ ನಿಂದ ಹಲ್ಲೆ ಮಾಡಿದಲ್ಲಿ ಆಗಬಹುದು ಎಂದು ಅಭಿಪ್ರಾಯ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ನನ್ನ ಅಭಿಪ್ರಾಯದ ಪತ್ರ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ *8* ಎಂದು ಸಹಿಯನ್ನು ನಿಪಿ *8*(ಎ) ಎಂದು ಗುರುತಿಸಲಾಗಿದೆ. ಈಗ ನಾನು ನೋಡುತ್ತಿರುವ ಮು.ಮಾ *2* ಎಂದು ಗುರುತಿಸಿರುವ ಡ್ರ್ಯಾಗರ್ ನಾನು ತಪಾಸಣೆ ಮಾಡಿದ ಆಯುಧ ಇರುತ್ತದೆ.

ಮು.ಮಾ *2* ರಿಂದ ಹಲ್ಲೆ ಮಾಡಿದಲ್ಲಿ ರಕ್ತಸ್ರಾವ ಆಗಿ ಮರಣ ಹೊಂದುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರ** ಗೈರು ಹಾಜರಿದ್ದು ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***